ಈ ಮೇಲೆ ನಮೂದಿಸಿರುವಂತೆ ಪ್ರಾಚ್ಯವಸ್ತು ಇಲಾಖೆಯೊಂದಿಗೆ ಸಮಾಲೋಚಿಸಲಾಗುತ್ತಿದ್ದು, ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಶಾಲಾ ಕಟ್ಟಡಗಳಲ್ಲಿ ಮೂಲಭೂತ ಸೌಕರ್ಯ

720 (1100) ಶ್ರೀ ಕುಮಾರಸ್ವಾಮಿ ಕೆ.ಜಿ. (ಶಿವಮೊಗ್ಗ ಗ್ರಾಮಾಂತರ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ಮತ್ತು ಭದ್ರಾವತಿ ತಾಲ್ಲೂಕುಗಳಲ್ಲಿ ವಿದ್ಯಾರ್ಥಿನಿಯರಿಗಾಗಿಯೇ ಇರುವ ಪ್ರಾಥಮಿಕ ಮತ್ತು ಪ್ರೌಢಶಾಲೆ ಹಾಗೂ ಪದವಿ ಪೂರ್ವ ಕಾಲೇಜುಗಳೆಷ್ಟು; ಈ ಸಂಸ್ಥೆಗಳಲ್ಲಿರುವ ವಿದ್ಯಾರ್ಥಿನಿಯರ ಸಂಖ್ಯೆ ಮತ್ತು ಶಿಕ್ಷಕಿಯರ ಸಂಖ್ಯೆ ಎಷ್ಟು;

ಆ) 2008ರಿಂದ ಅಕ್ಟೋಬರ್ 2011ರವರೆಗೆ ಹೊಸದಾಗಿ ಎಷ್ಟು ಕಟ್ಟಡಗಳನ್ನು ನಿರ್ಮಿಸಲಾಗಿದೆ (ವಿವರ ನೀಡುವುದು);

ಇ) ಹೊಸದಾಗಿ ನಿರ್ಮಿಸಲಾಗಿರುವ ಎಷ್ಟು ಕಟ್ಟಡಗಳಲ್ಲಿ ಮೂಲಭೂತ ಸೌಲಭ್ಯಗಳಾದ ಕುಡಿಯುವ ನೀರು, ಶೌಚಾಲಯ, ಗ್ರಂಥಾಲಯ, ವಿಶೇಷವಾಗಿ ವಿಜ್ಞಾನ ಕಲಿಸುವ ಶಾಲೆ/ಜ್ಯೂನಿಯರ್ ಕಾಲೇಜಿನಲ್ಲಿ ಪ್ರಯೋಗಾಲಯ ವ್ಯವಸ್ಥೆ ಮಾಡಲಾಗಿದೆಯೇ (ವಿವರ ನೀಡುವುದು);

ಈ) ಕನಿಷ್ಟ ಸೌಲಭ್ಯ ಒದಗಿಸದೇ ಇರುವ ಇಂತಹ ಶಾಲೆಗಳಲ್ಲಿ ಶೌಚಾಲಯ ವ್ಯವಸ್ಥೆಯನ್ನು ಕಟ್ಟಡ ನಿರ್ಮಾಣದ estimateನಲ್ಲಿ ಅಳವಡಿಸಿಕೊಳ್ಳದೇ ತಾಂತ್ರಿಕ/ಆಡಳಿತಾತ್ಮಕ ಮಂಜೂರಾತಿ ನೀಡಿದ ಅಧಿಕಾರಿಗಳಾರು; ಕಟ್ಟಡ ನಿರ್ಮಾಣ ಸರಿ ಪಡಿಸಲು ಸರಕಾರ ಕೈಗೊಂಡ ಕ್ರಮಗಳೇನು (ವಿವರ ನೀಡುವುದು)?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಶಿವಮೊಗ್ಗ ಮತ್ತು ಭದ್ರಾವತಿ ತಾಲ್ಲೂಕುಗಳಲ್ಲಿ ವಿದ್ಯಾರ್ಥಿನಿಯರಿಗಾಗಿಯೇ ಇರುವ ಪ್ರಾಥಮಿಕ ಮತ್ತು ಪ್ರೌಢಶಾಲೆ ಹಾಗೂ ಪದವಿ ಪೂರ್ವ ಕಾಲೇಜುಗಳ, ವಿದ್ಯಾರ್ಥಿನಿಯರ ಮತ್ತು ಶಿಕ್ಷಕಿಯರ ವಿವರ ಈ ಕೆಳಕಂಡಂತಿದೆ.

ಶಿವಮೊಗ್ಗ			
ಹಂತ	ಶಾಲೆ/ಕಾಲೇಜುಗಳ ಸಂಖ್ಯೆ	ವಿದ್ಯಾರ್ಥಿನಿಯರ ಸಂಖ್ಯೆ	ಶಿಕ್ಷಕಿಯರ ಸಂಖ್ಯೆ
ಪ್ರಾಥಮಿಕ	3	401	15
ಪ್ರೌಢ	1	325	10
ಪದವಿ ಪೂರ್ವ ಕಾಲೇಜು	1	539	5
ಭದ್ರಾವತಿ			
ಹಂತ	ಶಾಲೆ/ಕಾಲೇಜುಗಳ ಸಂಖ್ಯೆ	ವಿದ್ಯಾರ್ಥಿನಿಯರ, ಸಂಖ್ಯೆ	ಶಿಕ್ಷಕಿಯರ ಸಂಖ್ಯೆ
ಪ್ರಾಥಮಿಕ	3	3939	25
ಪ್ರೌಢ	2	964	14
ಪದವಿ ಪೂರ್ವ ಕಾಲೇಜು	2	1143	9

ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು, ಶಿವಮೊಗ್ಗ ಇಲ್ಲಿಗೆ ನೂತನ ಕಟ್ಟಡ ನಿರ್ಮಾಣವಾಗುತ್ತಿದೆ. ಸಂಚಿಹೊನ್ನಮ್ಮ ಸರ್ಕಾರಿ ಪದವಿ ಪೂರ್ವ ಕಾಲೇಜು, ಹಳೇ ನಗರ, ಭದ್ರಾವತಿ, ಶಿವಮೊಗ್ಗ ಜಿಲ್ಲೆ ಮತ್ತು ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು, ನ್ಯೂಟೌನ್, ಭದ್ರಾವತಿ, ಶಿವಮೊಗ್ಗ ಜಿಲ್ಲೆ ಇಲ್ಲಿಗೆ ಈಗಾಗಲೇ ನೂತನ ಕಟ್ಟಡ ನಿರ್ಮಾಣವಾಗಿರುತ್ತದೆ.

2008ರಿಂದ ಅಕ್ಟೋಬರ್ 2011ರವರೆಗೆ ಹೊಸದಾಗಿ ನಿರ್ಮಿಸಲಾದ ಹೊಸ ಕಟ್ಟಡಗಳು ಹಾಗೂ ಕೊಠಡಿಗಳ ವಿವರ ಈ ಕೆಳಕಂಡಂತೆ ಇದೆ.

6 ಪ್ರಾಥಮಿಕ ಶಾಲೆಗಳಿಗೆ 6 ಹೊಸ ಶಾಲಾ ಕಟ್ಟಡಗಳು, ಹಾಗೂ 74 ಪ್ರಾಥಮಿಕ ಶಾಲೆಗಳಿಗೆ 76 ಹೆಚ್ಚುವರಿ ಕೊಠಡಿಗಳು.

8 ಪ್ರೌಢಶಾಲೆಗಳಿಗೆ 36 ಕೊಠಡಿಗಳ ಕಟ್ಟಡಗಳು, 22 ಶಾಲೆಗಳಿಗೆ 43 ಹೆಚ್ಚುವರಿ ಕೊಠಡಿಗಳು

ಇ) ಹಾಲಿ ನಿರ್ಮಿಸಲಾಗಿರುವ ಸಂಚಿಹೊನ್ನಮ್ಮ ಸರ್ಕಾರಿ ಪದವಿ ಪೂರ್ವ ಕಾಲೇಜು, ಹಳೇ ನಗರ, ಭದ್ರಾವತಿ, ಶಿವಮೊಗ್ಗ ಜಿಲ್ಲೆ ಈ

ಕಾಲೇಜಿನ ಕಟ್ಟಡದಲ್ಲಿ ಹಾಗೂ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು, ನ್ಯೂಟೌನ್, ಭದ್ರಾವತಿ, ಶಿವಮೊಗ್ಗ ಜಿಲ್ಲೆ ಈ ಕಾಲೇಜಿನ ಕಟ್ಟಡದಲ್ಲಿ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗಿದೆ. ನಿರ್ಮಾಣ ಹಂತದಲ್ಲಿರುವ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು, ಶಿವಮೊಗ್ಗ ಇಲ್ಲಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗುವುದು.

ಹೊಸದಾಗಿ ನಿರ್ಮಿಸಲಾಗಿರುವ ಪ್ರಾಥಮಿಕ ಮತ್ತು ಪ್ರೌಢಶಾಲೆ ಕಟ್ಟಡಗಳಲ್ಲಿ ಕುಡಿಯುವ ನೀರು, ಶೌಚಾಲಯ, ಗ್ರಂಥಾಲಯ ಹಾಗೂ ಪ್ರಯೋಗಾಲಯಕ್ಕೆ ವ್ಯವಸ್ಥೆ ಮಾಡಲಾಗಿದೆ.

ಈ) ಹೊಸದಾಗಿ ಒದಗಿಸಲಾದ ಪ್ರಾಥಮಿಕ ಶಾಲಾ ಕಟ್ಟಡಗಳಲ್ಲಿ ಮೂಲಭೂತ ಸೌಲಭ್ಯಗಳಾದ ಕುಡಿಯುವ ನೀರು, ಶೌಚಾಲಯ ಸೌಲಭ್ಯ ಗಳನ್ನು ಒದಗಿಸಲಾಗಿರುತ್ತದೆ.

ಸರ್ಕಾರಿ ಪ್ರೌಢಶಾಲೆಗಳಿಗೆ ಆರ್.ಐ.ಡಿ.ಎಫ್. ಯೋಜನೆಯಡಿ ಮಂಜೂರಾದ ಕಟ್ಟಡಗಳನ್ನು ಜಿಲ್ಲಾ ಪಂಚಾಯತ್ ನೇಮಕ ಮಾಡಿದ ಏಜೆನ್ಸಿಯವರಾದ ನಿರ್ಮಿತಿ ಕೇಂದ್ರ ಮತ್ತು ಕೆ.ಆರ್.ಡಿ.ಎಲ್. ಇವರು ನಿರ್ಮಿಸಿರುತ್ತಾರೆ. ಕಾಮಗಾರಿ ನ್ಯೂನತೆ ಇರುವ ಕಡೆ ಸರಿಪಡಿಸಿ ಕೊಡುವಂತೆ ಸಂಬಂಧಿಸಿದ ಏಜೆನ್ಸಿಯವರನ್ನು ಕೋರಲಾಗಿರುತ್ತದೆ.

ಬೆಂಗಳೂರು ವಿಶ್ವವಿದ್ಯಾಲಯದ ಅಂತರ್ಜಾಲ ಸಂಪರ್ಕ ವ್ಯವಸ್ಥೆ

719 (897) ಶ್ರೀ ಕುಮಾರಸ್ವಾಮಿ ಕೆ.ಜಿ. (ಶಿವಮೊಗ್ಗ ಗ್ರಾಮಾಂತರ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಮತ್ತು ಸೆಂಟ್ರಲ್ ಕಾಲೇಜಿನ ನಡುವೆ ಅಂತರ್ಜಾಲ (Internet) ವಿನಿಮಯ ದೂರವಾಣಿ ಕೇಂದ್ರಗಳ ಸಾಮರ್ಥ್ಯಕ್ಕೆ ತಾಂತ್ರಿಕ ಕಾರ್ಯಕ್ಷಮತೆಗೆ ಹಾನಿಯಾಗುವ ರೀತಿಯಲ್ಲಿ ಅನುಷ್ಠಾನ ಮಾಡಿರುವುದಿಂದ ಸುಮಾರು ರೂ.86.00 ಲಕ್ಷ ನಷ್ಟವಾಗಲು ಕಾರಣಕರ್ತರು ಯಾರು; ಯಾವ ಅಧಿಕಾರಿಯ ವರದಿಯಿಂದ ಈ ನಷ್ಟ ಉಂಟಾಗಿದೆ ಎಂಬುದರ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಯೋಜನೆಯನ್ನು ರೂಪಿಸಿದ ಅಧೀಕಾರಿ ಯಾರು; ಅವರಿಗೆ ಇದ್ದ ತಾಂತ್ರಿಕ ಕಾರ್ಯಸಾಧ್ಯತೆ ಅರಿವು ಏಷ್ಟು; ಈ ವಿಶ್ವವಿದ್ಯಾಲಯಕ್ಕೆ ಆಗಿರುವ ನಷ್ಟ ರೂ.86.00 ಲಕ್ಷಗಳನ್ನು ಭರ್ತಿ ಮಾಡಲು ಸರ್ಕಾರವು